# ಹನಿಮೂನ್ ಮೂಡ್‌ನಲ್ಲಿ ನಾಗಭೂಷಣ್!

**ನವಿರು ಹಾಸ್ಯದ 'ಹನಿಮೂನ್' ವೆಬ್‌ಸಿರೀಸ್ ಇತ್ತೀಚೆಗಷ್ಟೇ ವೂಟ್ ಒಟಿಟಿ ವೇದಿಕೆಯಲ್ಲಿ ಬಿಡುಗಡೆಯಾಗಿದೆ. ಈ ಸಿರೀಸ್‌ಗೆ ಚಿತ್ರಕಥೆ ಬರೆದು, ನಾಯಕನಾಗಿ ನಟಿಸಿರುವ ಎನ್‌.ಎಸ್‌. ನಾಗಭೂಷಣ್ ಅವರ ಮುಖದ ಮೇಲೂ ಹನಿಮೂನ್ ಮುಗಿಸಿ ಬಂದ ಮದುಮಗನ ನಗುವಿದೆ.**

■ **ಪದ್ಮನಾಭ ಭಟ್**

ದಾಂಪತ್ಯ ಜೀವನ ಪ್ರಾರಂಭಿಸುವ ಉತ್ಸುಕತೆಯಿಂದ ಹೊರಟಿರುವ ಹುಡುಗ; ಚಿಕ್ಕಂದಿನಿಂದಲೂ ನೋಡಿದ ಜಾಗಕ್ಕೇ ಮತ್ತೆ ಹೋಗಬೇಕಲ್ಲ ಎಂಬ ಒಲ್ಲದ ಮನದಿಂದ ಹೊರಟ ಹುಡುಗಿ. ಆಗಷ್ಟೇ ಮದುವೆಯಾದ ದಂಪತಿ ಕೇರಳಕ್ಕೆ ಹನಿಮೂನಿಗೆಂದು ಹೊರಟಾಗ ಏನಾಗಬಹುದು? (ಏನಾದರೂ ಆಗುತ್ತದೆಯೋ ಇಲ್ಲವೋ ಎಂಬ ಅನುಮಾನವೇ ಹುಡುಗನ ಮನಸ್ಸಲ್ಲಿ ಹೊಗೆಯಾಡುತ್ತಿದೆ!).

ಇಂಥದೊಂದು ನವಿರು ಎಳೆಯನ್ನು ಅಶ್ಲೀಲತೆಯ ಗಡಿರೇಖೆ ಚೂರೂ ತಾಗದೆ ನಿರೂಪಿಸುವ ವೆಬ್ ಸಿರೀಸ್ 'ಹನಿಮೂನ್'. ಎನ್.ಎಸ್. ನಾಗಭೂಷಣ್ ಚಿತ್ರಕಥೆ ಬರೆದು ಮುಖ್ಯಪಾತ್ರದಲ್ಲಿ ಅಭಿನಯಿಸಿರುವ ಈ ವೆಬ್‌ಸಿರೀಸ್ ಈಗಾಗಲೇ 'ವೂಟ್' ಒಟಿಟಿ ವೇದಿಕೆಯಲ್ಲಿ ವೀಕ್ಷಣೆಗೆ ಲಭ್ಯವಿದೆ.

ವೆಬ್‌ವೀಕ್ಷಕರಿಗೆ ನಾಗಭೂಷಣ್ ಪರಿಚಯ ಇರುವುದು 'ಕೆಇಬಿ' ಯೂಟ್ಯೂಬ್ ಚಾನಲ್‌ನಿಂದ. ಕನ್ನಡದಲ್ಲಿ ವೆಬ್ ಕಂಟೆಂಟ್‌ಗಳ ಇಲ್ಲವೇ ಇಲ್ಲ ಎನ್ನುವ ಹೊತ್ತಿಗೆ ಹುಟ್ಟಿಕೊಂಡ ಈ ಚಾನಲ್ ಪ್ರೇಕ್ಷಕರಿಗೆ ನಗೆಗುಳಿಗೆ ನೀಡಿ ಮೆಚ್ಚುಗೆ ಗಳಿಸಿತ್ತು. ಅದೇ ಹೊತ್ತಿನಲ್ಲಿ ಸಕ್ರೀಯವಾಗಿದ್ದ ಆರ್.ಜೆ. ಪ್ರದೀಪ್ ಅವರ ಸಖತ್ ಸ್ಟುಡಿಯೊ ಕೂಡ ಕನ್ನಡದಲ್ಲಿ ವೆಬ್ ಕಂಟೆಂಟ್‌ಗಳನ್ನು ಸೃಷ್ಟಿಸುವ ಕೆಲಸದಲ್ಲಿಯೇ ತೊಡಗಿಕೊಂಡಿತ್ತು.

ಈ ಎರಡೂ ತಂಡಗಳು ಒಟ್ಟಿಗೇ ಸೇರಿ ಒಂದು ವೆಬ್ ಸಿರೀಸ್ ನಿರ್ಮಾಣ ಮಾಡಲು ನಿರ್ಧರಿಸಿದಾಗ ಅವರ ಜೊತೆಗೆ ನಿಂತಿದ್ದು ನಟ ಶಿವರಾಜ್‌ಕುಮಾರ್. ಅವರ ಮಗಳು ನಿವೇದಿತಾ ಅವರೇ ಈ ವೆಬ್ ಸಿರೀಸ್ ನಿರ್ಮಾಣಕ್ಕೂ ಮುಂದೆ ಬಂದರು.

'ಸಖತ್ ಸ್ಟೂಡಿಯೊ ಮತ್ತು ನಿವೇದಿತಾ ಅವರು ಸೇರಿಕೊಂಡು ನಿರ್ಮಿಸಿದ ವೆಬ್ ಸಿರೀಸ್ ಇದು. ಈ ಕಥೆಯ ಐಡಿಯಾವನ್ನೂ ಅವರೇ ಕೊಟ್ಟಿದ್ದು. ಅದನ್ನು ಇಟ್ಟುಕೊಂಡು ನಾನು ಒಂದೊಂದೇ ಎಪಿಸೋಡ್ ಬರೆಯುತ್ತ ಹೋದೆ. ಪ್ರತಿ ಎಪಿಸೋಡ್ ಬರೆದಾದ ಮೇಲೂ ಸಖತ್ ಸ್ಟೂಡಿಯೊ ತಂಡದ ಜೊತೆ ಚರ್ಚೆ ಮಾಡುತ್ತಿದ್ದೆ' ಎಂದು 'ಹನಿಮೂನ್' ಸ್ಕ್ರಿಪ್ಟ್ ಸಿದ್ಧವಾಗದ ಕುರಿತು ನಾಗಭೂಷಣ್ ಹೇಳಿಕೊಳ್ಳುತ್ತಾರೆ.

ಆಡಿಷನ್ ಮೂಲಕ ಸಂಜನಾ ಆನಂದ್ ಈ ಸಿರೀಸ್‌ನ ನಾಯಕಿಯಾಗಿ ಆಯ್ಕೆಯಾದರು. 'ಸಂಜನಾ ಆಡಿಷನ್‌ನಲ್ಲಿ ನಮ್ಮ ಇಡೀ ತಂಡಕ್ಕೆ ಮೆಚ್ಚುಗೆಯಾಗಿ ನಾಯಕಿ ಪಾತ್ರಕ್ಕೆ ಆಯ್ಕೆಯಾದರು. ಅವರು ತುಂಬ ಚೆನ್ನಾಗಿ ಈ ಪಾತ್ರವನ್ನು ನಿರ್ವಹಿಸಿದ್ದಾರೆ. ಇದನ್ನು ನಾನೇ ಬರೆದಿದ್ದರೂ, ಅದರಲ್ಲಿ ನಾನೇ ನಟಿಸಿದ್ದರೂ ಈ ಸಿರೀಸ್ ಮುಗಿದ ಮೇಲೆ ಪ್ರೇಕ್ಷಕನ ಮನಸಲ್ಲಿ ಉಳಿದುಕೊಳ್ಳುವುದು ಸಂಜನಾ ಪಾತ್ರವೇ' ಎನ್ನುತ್ತಾರೆ ನಾಗಭೂಷಣ್. ಅವರ ಜೋಡಿ ಎಷ್ಟು ಚೆನ್ನಾಗಿ ಹೊಂದಿಕೊಂಡಿತ್ತೆಂದರೆ, 'ನಾವಿಬ್ಬರೂ ಗಂಡ ಹೆಂಡತಿ. ಈಗಷ್ಟೇ ಮದುವೆಯಾಗಿದೆ. ಪೋಸ್ಟ್ ವೆಡ್ಡಿಂಗ್ ಶೂಟ್ ಮಾಡುತ್ತಿದ್ದೀವಿ. ಎಂದು ಗಗನಸಖಿಯರಿಗೆ ನಂಬಿಸಿ ವಿಮಾನದಲ್ಲಿಯೂ ಚಿತ್ರೀಕರಣ ಮಾಡಿದ್ದಾರಂತೆ.

ಚಿತ್ರೀಕರಣ ಮುಗಿಸಿ ವೆಬ್‌ಸಿರೀಸ್ ಸಿದ್ಧಪಡಿಸಿಕೊಂಡ ತಂಡಕ್ಕೆ ಮುಂದಿನ ದಾರಿ ಸುಗಮವೇನೂ ಆಗಿರಲಿಲ್ಲ. 2019ರಲ್ಲಿಯೇ 'ಹನಿಮೂನ್' ಸಿದ್ಧವಾಗಿತ್ತು. ಆದರೆ ಎಲ್ಲಿ ಬಿಡುಗಡೆ ಮಾಡುವುದು ಎಂಬ ಪ್ರಶ್ನೆ ಕಗ್ಗಂಟಾಗಿಯೇ ಉಳಿದಿತ್ತು. ಕನ್ನಡದ ಕಂಟೆಂಟ್ ಎಂದಕೂಡಲೇ ಮೂಗು ಮುರಿಯುವ ದೊಡ್ಡ ದೊಡ್ಡ ಒಟಿಟಿ ಪ್ಲ್ಯಾಟ್‌ಫಾರ್ಮ್‌ಗಳು ಎಟುಕಲಾರದಷ್ಟು ಎತ್ತರದಲ್ಲಿದ್ದವು. ಯೂಟ್ಯೂಬ್‌ನಲ್ಲಿ ಬಿಡುಗಡೆ ಮಾಡಲು ತಂಡಕ್ಕೇ ಮನಸಿರಲಿಲ್ಲ. ಇಂಥ ಸಮಯದಲ್ಲಿ ಈ ವೆಬ್‌ಸಿರೀಸ್‌ಗೆ ತೆಲುಗಿನ 'ಆಹಾ!' ಒಟಿಟಿ ವೇದಿಕೆಯಿಂದ

